# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1226 |
| ಸದಸ್ಯರ ಹೆಸರು | : | ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19.12.2024. |
| ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳ ರಾಜ್ಯದ ಜಿ.ಡಿ.ಪಿ ಮತ್ತು ಆರ್ಥಿಕತೆಯ ಸಮಗ್ರ ವಿವರ ಹಾಗೂ ರಾಜ್ಯದಲ್ಲಿ ತಲಾವಾರು ಆದಾಯ ಎಷ್ಟಿದೆ; ಈ ಆದಾಯ ಕುಸಿಯುವ ಸಾಧ್ಯತೆ ಇದೆಯೇ; ತಲಾವಾರು ಆದಾಯವನ್ನು ಪರಿಗಣಿಸಲು ಇರುವ ಮಾನದಂಡಗಳು ಯಾವುವು; | ಕಳೆದ 5 ವರ್ಷಗಳ ರಾಜ್ಯದ ಜಿ.ಡಿ.ಪಿ, ಆರ್ಥಿಕತೆ ಹಾಗೂ ತಲಾವಾರು ಆದಾಯದ ವಿವರ ಈ ಕೆಳಕಂಡಂತಿದೆ: (ರೂ.ಕೋಟಿಗಳಲ್ಲಿ) (see table below) |

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ವಲಯ | 2019-20 | 2020-21 | 2021-22 ದ್ವಿ.ಪ.ಅಂ | 2022-23 ಪ್ರ.ಪ.ಅಂ | 2023-24 ಮು.ಅಂ |
|---|---|---|---|---|---|---|
| 1. | ಪ್ರಾಥಮಿಕ ವಲಯ | 191535 | 239817 | 285270 | 297254 | 314700 |
| 2. | ದ್ವಿತೀಯ ವಲಯ | 306037 | 303950 | 377394 | 420852 | 449925 |
| 3. | ತೃತೀಯ ವಲಯ | 979267 | 964902 | 1160646 | 1358196 | 1532672 |
| 4. | ಒಟ್ಟು ಆಂತರಿಕ ಉತ್ಪನ್ನ (ಮೂಲ ಬೆಲೆಗಳಲ್ಲಿ) | 1476840 | 1508669 | 1823310 | 2076302 | 2297296 |
| 5. | ಉತ್ಪನ್ನ ತೆರಿಗೆಗಳು | 166975 | 168696 | 197400 | 227936 | 262900 |
| 6. | ಉತ್ಪನ್ನ ಸಬ್ಸಿಡಿಗಳು | 27988 | 35904 | 42615 | 34243 | 59464 |
| 7. | ಒಟ್ಟು ಆಂತರಿಕ ಉತ್ಪನ್ನ (ಮಾರುಕಟ್ಟೆ ಬೆಲೆಗಳಲ್ಲಿ) | 1615827 | 1641460 | 1978094 | 2269995 | 2500733 |
| 8. | ತಲಾದಾಯ ರೂ.ಗಳಲ್ಲಿ | 222141 | 221781 | 266866 | 304474 | 332926 |

ತಲಾವಾರು ಆದಾಯ ಕುಸಿಯುವ ಸಾಧ್ಯತೆಗಳು ಇಲ್ಲ.

ಪ್ರಸಕ್ತ ಬೆಲೆಗಳಲ್ಲಿನ ರಾಜ್ಯ ನಿವ್ವಳ ಆಂತರಿಕ ಉತ್ಪನ್ನವನ್ನು ವಿತ್ತೀಯ ವರ್ಷದ ನಟ್ಟನಡುವಿನ ಅಂದಾಜು ಜನಸಂಖ್ಯೆಯೊಂದಿಗೆ ಭಾಗಿಸಿ ತಲಾಆದಾಯವನ್ನು ಲೆಕ್ಕಹಾಕಲಾಗುತ್ತದೆ.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ರಾಜ್ಯದ ಜಿ.ಡಿ.ಪಿ.ಯನ್ನು ವೃದ್ಧಿಸಲು ಸರ್ಕಾರ ರೂಪಿಸಿರುವ ಕಾರ್ಯತಂತ್ರವೇನು; ಹಾಕಿಕೊಂಡಿರುವ ಕಾರ್ಯಕ್ರಮಗಳು ಯಾವುವು; | ರಾಜ್ಯ ಸರ್ಕಾರವು ರಾಜ್ಯ ಆಂತರಿಕ ಉತ್ಪನ್ನವನ್ನು ವೃದ್ಧಿಸುವ ಸಲುವಾಗಿ ಈ ಕೆಳಕಂಡ ನೀತಿ ನಿರೂಪಣೆಗಳನ್ನು ಕೈಗೆತ್ತಿಕೊಂಡಿರುತ್ತದೆ:<br>1. ಕರ್ನಾಟಕ ಐಟಿ ಕಾರ್ಯನೀತಿ 2020-25<br>2. ಕರ್ನಾಟಕ ಸ್ಟಾರ್ಟ್ ಅಫ್ ನೀತಿ 2022-27<br>3. ಕರ್ನಾಟಕ ಕೈಗಾರಿಕೆ ನೀತಿ 2020-25<br>4. ಕರ್ನಾಟಕ ವಿದ್ಯುನ್ಮಾನ ವ್ಯವಸ್ಥೆಗಳ ವಿನ್ಯಾಸ ಮತ್ತು ತಯಾರಿಕೆ (ಕೆಇಎಸ್ ಡಿಎಂ) ನೀತಿ 2017-22<br>5. ಕರ್ನಾಟಕ ಪ್ರವಾಸೋದ್ಯಮ ನೀತಿ 2020-26<br>6. ವಿಶೇಷ ಆರ್ಥಿಕ ವಲಯ ಕಾಯ್ದೆ 2005<br>7. ವಿದ್ಯುತ್ ವಾಹನ ನೀತಿ 2017 |

8. ಕರ್ನಾಟಕ ಸೌರ ನೀತಿ 2014-21
9. ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022-27, ಇತ್ಯಾದಿ.

ಇ) 2023-24 ಮತ್ತು 2024-25ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ರಾಜ್ಯದ ಒಟ್ಟಾರೆ ತೆರಿಗೆ ಸಂಗ್ರಹ ಗುರಿ ಎಷ್ಟು; 2023-24 ಮತ್ತು 2024-25ನೇ ಸಾಲಿಗೆ (ನವೆಂಬರ್ ಅಂತ್ಯದವರೆಗೆ) ಸಂಗ್ರಹವಾಗಿರುವ ತೆರಿಗೆ ಎಷ್ಟು; (ಇಲಾಖಾವಾರು ವಿವರ ನೀಡುವುದು)

2023-24 ಮತ್ತು 2024-25ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ರಾಜ್ಯದ ಒಟ್ಟಾರೆ ತೆರಿಗೆ ಸಂಗ್ರಹ ಗುರಿ ಮತ್ತು ವಿವಿಧ ಆದಾಯ ಮೂಲಗಳಿಂದ ಸಂದಾಯವಾದ ಆದಾಯದ ವಿವರಗಳು ಈ ಕೆಳಕಂಡಂತಿರುತ್ತವೆ:

(ರೂ.ಕೋಟಿಗಳಲ್ಲಿ)

| ಕ್ರ ಸಂ. | ವಿವರಗಳು | 2023-24 ನೇ ಸಾಲಿನ ರಾಜ್ಯ ಸರ್ಕಾರದ ಆದಾಯದ ಅಂದಾಜು | 2023-24ನೇ ಸಾಲಿನ ರಾಜ್ಯ ಸರ್ಕಾರದ ಆದಾಯದ ವಿವರಗಳು (ಮಹಾಲೇಖಪಾಲರ ಪೂರ್ವ ವಾಸ್ತವಿಕ ಲೆಕ್ಕದನ್ವಯ) | 2024-25ನೇ ಸಾಲಿನ ರಾಜ್ಯ ಸರ್ಕಾರದ ಆದಾಯದ ಅಂದಾಜು | 2024-25ನೇ ಸಾಲಿನ ರಾಜ್ಯ ಸರ್ಕಾರದ ಆದಾಯದ ವಿವರಗಳು (ನವೆಂಬರ್ 2024ರ ಅಂತ್ಯಕ್ಕೆ ಮಹಾ ಲೇಖಪಾಲರ ಲೆಕ್ಕದನ್ವಯ) |
|---|---|---|---|---|---|
| | ಸ್ವಂತ ತೆರಿಗೆ ರಾಜಸ್ವ | | | | |
| 1 | a. ವಾಣಿಜ್ಯ ತೆರಿಗೆ | 98650.00 | 93196.96 | 110000.00 | 67484.71 |
| | b. ಅಬಕಾರಿ | 36000.00 | 34628.98 | 38525.00 | 23733.08 |
| | c. ಮೋಟಾರು ವಾಹನ ತೆರಿಗೆ | 11500.00 | 11287.26 | 13000.00 | 7785.10 |
| | d. ಮುದ್ರಾಂಕ ಮತ್ತು ನೋಂದಣಿ | 25000.00 | 20146.71 | 26000.00 | 15045.71 |
| | e. ಇತರೆ | 2152.60 | 4245.13 | 2368.03 | 665.51 |
| 2 | ಸ್ವಂತ ತೆರಿಗೆಯೇತರ ರಾಜಸ್ವ | 12500.00 | 13117.37 | 13499.60 | 9136.37 |
| 3 | ಕೇಂದ್ರ ಸರ್ಕಾರದ ತೆರಿಗೆಯ ಹಂಚಿಕೆ | 37252.21 | 41192.63 | 44485.49 | 29615.98 |
| 4 | ಕೇಂದ್ರ ಸರ್ಕಾರದಿಂದ ಸಹಾಯಾನುದಾನ | 15355.00 | 15527.84 | 15299.70 | 9766.29 |
| | | | | | |
| | **ಒಟ್ಟು** | **238409.81** | **233342.87** | **263177.82** | **163232.75** |

ಈ) ತೆರಿಗೆ ಸಂಗ್ರಹ ಗುರಿ ಸಾಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ರಾಜ್ಯದ ರಾಜಸ್ವ ಸಂಗ್ರಹಣೆಯನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳು ಕೆಳಕಂಡಂತಿದೆ:

1. ಹಲವು ವರ್ಷಗಳಿಂದ ಪರಿಷ್ಕರಣೆಯಾಗದ ತೆರಿಗೆ ದರಗಳನ್ನು ಪರಿಷ್ಕರಿಸಲಾಗಿದೆ.
2. ನೆರೆ ರಾಜ್ಯಗಳ ಮದ್ಯದ ಬೆಲೆಯು ಕಡಿಮೆಯಿರುತ್ತದೆ, ಆದ್ದರಿಂದ ನೆರೆ ರಾಜ್ಯಗಳ ಮದ್ಯದ ಬೆಲೆಗಳಿಗೆ ಅನುಗುಣವಾಗಿ IML ಹಾಗು ಬಿಯರ್‌ನ ಸ್ಲ್ಯಾಬ್‌ಗಳನ್ನು ಪರಿಷ್ಕರಿಸಲಾಗಿದೆ.
3. ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಸಂಬಂಧಿಸಿದಂತೆ ಮಾರ್ಗಸೂಚಿ ಬೆಲೆಯು ನಿಯಮದ ಪ್ರಕಾರ ಪ್ರತಿ ವರ್ಷ ಪರಿಷ್ಕರಿಸಬೇಕಾಗಿರುತ್ತದೆ. ಆದರೆ ಕೋವಿಡ್ ಸಾಂಕ್ರಮಿಕದ ಕಾರಣ 2019 ರಿಂದ ಸರ್ಕಾರವು ಮಾರ್ಗಸೂಚಿ ಬೆಲೆಯನ್ನು ಪರಿಷ್ಕರಿಸಿರುವುದಿಲ್ಲ. ಆದ್ದರಿಂದ ಮಾರುಕಟ್ಟೆ ಬೆಲೆಗೆ ಅನುಗುಣವಾಗಿ ಮಾರ್ಗಸೂಚಿ ಬೆಲೆಯನ್ನು ಪರಿಷ್ಕರಿಸಲಾಗಿರುತ್ತದೆ. ಅಂತೆಯೇ ನೆರೆ ರಾಜ್ಯಗಳ ಮುದ್ರಾಂಕ ಶುಲ್ಕಕ್ಕೆ ಅನುಗುಣವಾಗಿ ನಮ್ಮ ರಾಜ್ಯದಲ್ಲಿ ನೋಂದಣಿ ಅಗತ್ಯವಿಲ್ಲದ ಎಲ್ಲಾ ದಾಖಲೆಗಳ (Non-Registrable Documents) ಮುದ್ರಾಂಕ ಶುಲ್ಕವನ್ನು ಪರಿಷ್ಕರಿಸಲಾಗಿದೆ.
4. ನಮ್ಮ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ನ ಮಾರಾಟ ದರಗಳು ನೆರೆ ರಾಜ್ಯಗಳಿಗೆ ಹೋಲಿಸಿದಾಗ ಕಡಿಮೆಯಿದ್ದು, ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ವಿಧಿಸುವ ಮಾರಾಟ ತೆರಿಗೆಯನ್ನು ಪರಿಷ್ಕರಿಸಲಾಗಿದೆ.
5. ವಿವಿಧ ವರ್ಗದ ವಾಹನಗಳಿಗೆ ಮೋಟಾರು ವಾಹನ ತೆರಿಗೆಯನ್ನು ವಿಧಿಸುತ್ತಿದ್ದು, ಇದು ಹಲವು ವರ್ಷಗಳಿಂದ ಪರಿಷ್ಕರಣೆಯಾಗಿರುವುದಿಲ್ಲ. 2023-24ನೇ ಸಾಲಿನಲ್ಲಿ ವಿವಿಧ ವರ್ಗದ ವಾಹನಗಳ ಮೇಲೆ ವಿಧಿಸುವ ಮೋಟಾರು ವಾಹನ ತೆರಿಗೆಯನ್ನು

| | | |
|---|---|---|
| | | ಪರಿಷ್ಕರಿಸಲಾಗಿರುತ್ತದೆ.<br>6. ಅಲ್ಲದೆ, ಸರ್ಕಾರವು ಸಾರ್ವಜನಿಕರಿಗೆ ಒದಗಿಸುವ ವಿವಿಧ ಸೇವೆಗಳಿಗೆ ವಿಧಿಸುವ ಶುಲ್ಕವು ಹಲವು ವರ್ಷಗಳಿಂದ ಪರಿಷ್ಕರಣೆಗೊಳ್ಳದ ಕಾರಣ ಅವುಗಳನ್ನು ಪರಿಷ್ಕರಿಸಲಾಗಿರುತ್ತದೆ.<br>7. ಇದಲ್ಲದೆ, ಸರ್ಕಾರವು ತೆರಿಗೆ ಇಲಾಖೆಗಳನ್ನು ಬಲಪಡಿಸುವ ಮೂಲಕ ತೆರಿಗೆ ಸೋರಿಕೆಯನ್ನು ಕಡಿಮೆ ಮಾಡುವುದರೊಂದಿಗೆ ತೆರಿಗೆ ಅನುಪಾಲನೆಯನ್ನು ಹೆಚ್ಚಿಸಲು ಅಗತ್ಯ ಕ್ರಮವಹಿಸಿರುತ್ತದೆ. |

ಸಂಖ್ಯೆ: ಪಿಡಿಎಸ್ 161 ಪಿಆರ್‌ಐ 2024

(ಡಿ.ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.